ಕಾಲೇಜು ಶಿಕ್ಷಣ ... ಕರ
ಕ್ರಮ ಸಂಖ್ಯೆ 315
ದಿನಾಂಕ 20/10/16

Dire/CAO
Implement the
L.O

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಉನ್ನತ ಶಿಕ್ಷಣ ಇಲಾಖೆಯ ಸರ್ಕಾರಿ ಮತ್ತು ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸಕ್ರಮಗೊಂಡ ಅರೆಕಾಲಿಕ ಉಪನ್ಯಾಸಕರಿಗೆ ಯುಜಿಸಿ ವೇತನ ವಿಸ್ತರಿಸುವ ಬಗ್ಗೆ.

ಓದಲಾಗಿದೆ:-
1. ಸರ್ಕಾರದ ಆದೇಶ ಸಂ. ಇಡಿ 37 ಯುಎನ್ಇ 2009, ದಿನಾಂಕ: 26-12-2009.
2. ಅನುದಾನಿತ ಖಾಸಗಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಅರೆಕಾಲಿಕ ಉಪನ್ಯಾಸಕರಾಗಿ ಸಕ್ರಮಗೊಂಡು ರಾಜ್ಯ ವೇತನ ಶ್ರೇಣಿ ವೇತನ ಪಡೆಯುತ್ತಿರುವ ಅಧ್ಯಾಪಕರ ಸಂಘದ ದಿನಾಂಕ: 14-01-2014ರ ಪತ್ರ.
3. ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ ಇವರ ಪತ್ರ ಸಂ. ಕಾಶಿಇ/321/ಆಯುಜಿಸಿವಿ/2015-16/ಸೇವಿ-1, ದಿನಾಂಕ: 28-01-2016.
4. ವಿಶ್ವವಿದ್ಯಾಲಯ ಧನ ಸಹಾಯ ಆಯೋಗದ ದಿನಾಂಕ:12-04-2016ರ ಪತ್ರಿಕಾ ಗೋಷ್ಠಿ.
5. ವಿಶ್ವವಿದ್ಯಾಲಯ ಧನಸಹಾಯ ಆಯೋಗದ ಅಧಿಸೂಚನೆ ಸಂಖ್ಯೆ: F-1-2/2016/PS/Amendment. ದಿನಾಂಕ: 04-05-2016.

ಕಾಲೇಜು ... ಆಯುಕ್ತರ
ಸಂಖ್ಯೆ 1231
ದಿನಾಂಕ 18 OCT 2016
ಶಾಖೆ ಸೇವಿ-1

---

**ಪ್ರಸ್ತಾವನೆ:**

ರಾಜ್ಯದ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳಲ್ಲಿ 1993-94 ಮತ್ತು 1994-95ನೇ ಶೈಕ್ಷಣಿಕ ಸಾಲುಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅರೆಕಾಲಿಕ ಉಪನ್ಯಾಸಕರುಗಳನ್ನು **(Absorption of persons working as Part Time Lecturers in the Aided Private Educational Institutions) Department of Collegiate Education) (Special) Rules - 2003**ರನ್ವಯ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳ ಸೇವೆಯಲ್ಲಿ ಸೇವಾಸಕ್ರಮಗೊಳಿಸಲಾಗಿದೆ. ನಂತರ ಸರ್ಕಾರಿ ಅಧಿಸೂಚನೆ ಸಂ. ಇಡಿ 292 ಯುಪಿಸಿ 2004(1), ದಿನಾಂಕ: 10-12-2004ರಲ್ಲಿ ಸದರಿ ಸಕ್ರಮಾತಿಗೊಂಡ ಅರೆಕಾಲಿಕ ಉಪನ್ಯಾಸಕರ ಯುಜಿಸಿ ವೇತನವನ್ನು ಪಡೆಯಬೇಕಾಗಿದ್ದಲ್ಲಿ ಎನ್‌ಇಟಿ/ಎಸ್‌ಎಲ್‌ಇಟಿಯಲ್ಲಿ ಉತ್ತೀರ್ಣರಾಗಿರಬೇಕೆಂದು ಷರತ್ತು ವಿಧಿಸಲಾಗಿತ್ತು.

ಮೇಲೆ ಓದಲಾದ (1)ರ ಆದೇಶದನ್ವಯ ಸಕ್ರಮಾತಿಗೊಂಡ ಅರೆಕಾಲಿಕ ಉಪನ್ಯಾಸಕರುಗಳಿಗೆ ಯಜಿಸಿಯ ಪರಿಷ್ಕೃತ 6ನೇ ವೇತನವನ್ನು ವಿಸ್ತರಿಸಲಾಗಿದೆ. ಸದರಿ ಆದೇಶದಲ್ಲಿ ದಿನಾಂಕ: 11-07-2009ರೊಳಗೆ ಎನ್‌ಇಟಿ/ಎಸ್‌ಎಲ್‌ಇಟಿ/ಪಿಹೆಚ್‌ಡಿ/ಎಂಫಿಲ್ ಪದವಿ ಪಡೆದವರಿಗೆ ಮಾತ್ರ 2006ರ ಪರಿಷ್ಕೃತ ಯುಜಿಸಿ ವೇತನವನ್ನು ವಿಸ್ತರಿಸಲಾಗುವುದು ಎಂದು ಆದೇಶಿಸಲಾಗಿದೆ. ದಿನಾಂಕ: 11-07-2009ರ ನಂತರ ಎನ್‌ಇಟಿ/ಎಸ್‌ಎಲ್‌ಇಟಿ/ಪಿ.ಹೆಚ್‌ಡಿ ಪಡೆದ ಉಪನ್ಯಾಸಕರುಗಳಿಗೆ ಮಾತ್ರ ಯುಜಿಸಿ ವೇತನವನ್ನು ವಿಸ್ತರಿಸಲಾಗಿದೆ.

ಮೇಲೆ ಓದಲಾದ (2)ರ ಪತ್ರದಲ್ಲಿ, ದಿನಾಂಕ: 11-07-2009ರ ಪೂರ್ವದಲ್ಲಿ ಎಂ.ಫಿಲ್‌ಗೆ ನೋಂದಣಿ ಮಾಡಿ, ನಂತರ ಫಲಿತಾಂಶವನ್ನು ಪ್ರಕಟವಾಗಿರುವ ಸಕ್ರಮಗೊಂಡ ಅರೆಕಾಲಿಕ ಉಪನ್ಯಾಸಕರುಗಳಿಗೆ ಯುಜಿಸಿ ಪರಿಷ್ಕೃತ 6ನೇ ವೇತನದಿಂದ ವಂಚಿತರಾಗಿದ್ದು, ತಮಗೂ ಸಹ ಯುಜಿಸಿ ವೇತನವನ್ನು ವಿಸ್ತರಿಸಬೇಕೆಂದು ಸಕ್ರಮಗೊಂಡ ಅಧ್ಯಾಪಕರ ಸಂಘದವರು ಕೋರಿರುತ್ತಾರೆ.

ಮೇಲೆ ಓದಲಾದ (3)ರ ಪತ್ರದಲ್ಲಿ ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ ಇವರು, ದಿನಾಂಕ: 11-07-2009ರ ಪೂರ್ವದಲ್ಲಿ ಎಂ.ಫಿಲ್ ಪದವಿಗೆ ನೊಂದಾಯಿಸಿ ಅನಂತರ ಎಂ.ಫಿಲ್. ಪದವಿ ಫಲಿತಾಂಶ ಪ್ರಕಟಗೊಂಡಿರುವ ಅರೆಕಾಲಿಕ ಉಪನ್ಯಾಸಕರ ಸಂಖ್ಯೆ 46 ಎಂದು ಮಾಹಿತಿ ನೀಡುತ್ತಾ, ಇದರಿಂದ ಸರ್ಕಾರಕ್ಕೆ ಅಂದಾಜು ರೂ. 74,88,984/- ವಾರ್ಷಿಕ ಆರ್ಥಿಕ ಹೊರೆ ಉಂಟಾಗುವುದೆಂದು ಹಾಗೂ ಬಾಕಿ ವೇತನ ರೂ. 4,22,92,262/-ಅನ್ನು ನೀಡಬೇಕಾಗುವುದೆಂದು ಮಾಹಿತಿ ನೀಡಿರುತ್ತಾರೆ.

ಮೇಲೆ ಓದಲಾದ (4) ಮತ್ತು (5)ರ ವಿಶ್ವವಿದ್ಯಾಲಯ ಧನಸಹಾಯ ಆಯೋಗದ ಪತ್ರಿಕಾಗೋಷ್ಠಿ ಹಾಗೂ ಅಧಿಸೂಚನೆಯಲ್ಲಿ ನೀಡಿರುವ ಸ್ಪಷ್ಟೀಕರಣದಂತೆ, ದಿನಾಂಕ: 11-07-2009ರ ಪೂರ್ವದಲ್ಲಿ ಎಂ.ಫಿಲ್ ಪದವಿಗೆ ನೊಂದಣಿ ಮಾಡಿ ನಂತರ ಪದವಿ ಪಡೆದವರ ಪದವಿಯನ್ನು ಪರಿಗಣಿಸಬೇಕೆಂದು ಸೂಚಿಸಲಾಗಿದೆ. ಅದರಂತೆ, ದಿನಾಂಕ:11-07-2009ರ ಪೂರ್ವದಲ್ಲಿ ಎಂ.ಫಿಲ್ ಪದವಿಗೆ ನೊಂದಣಿ ಮಾಡಿ ನಂತರ ಪದವಿ ಪಡೆದ ಸರ್ಕಾರಿ ಮತ್ತು ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸಕ್ರಮಗೊಂಡ ಅರೆಕಾಲಿಕ ಉಪನ್ಯಾಸಕರಿಗೆ ಯುಜಿಸಿ ವೇತನ ವಿಸ್ತರಿಸಲು ಸರ್ಕಾರವು ಪರಿಶೀಲಿಸಿದ್ದು, ಅದರಂತೆ, ಈ ಕೆಳಕಂಡ ಆದೇಶ.

.....2

<u>ಸರ್ಕಾರಿ ಆದೇಶ ಸಂಖ್ಯೆ: ಇಡಿ 378 ಯುಎನ್ಇ 2014, ಬೆಂಗಳೂರು ದಿನಾಂಕ: 17-10-2016.</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ದಿನಾಂಕ: 11-07-2009ರ ಪೂರ್ವದಲ್ಲಿ ಎಂ.ಫಿಲ್. ಪದವಿಗೆ ನೊಂದಣಿ ಮಾಡಿ ನಂತರ ಪದವಿ ಪಡೆದ ಸಕ್ರಮಾತಿಗೊಂಡ ಅರೆಕಾಲಿಕ ಉಪನ್ಯಾಸಕರುಗಳಿಗೆ ಮಾತ್ರ ಯುಜಿಸಿ ವೇತನವನ್ನು ವಿಸ್ತರಿಸಲು ಈ ಕೆಳಕಂಡಂತೆ ಆದೇಶಿಸಿದೆ.

> The State Government agrees for grant of UGC pay scales to such teachers/Part time Lecturers regularised in service and who have registered for M. Phil prior to 11-07-2009. The grant of UGC pay scales in such cases shall be from the date M. Phil Degree is awarded to them.

ಸಕ್ರಮಾತಿಗೊಂಡ ಅರೆಕಾಲಿಕ ಉಪನ್ಯಾಸಕರುಗಳಿಗೆ ಯುಜಿಸಿ ವೇತನವನ್ನು ವಿಸ್ತರಿಸುವಾಗ ಈ ಕೆಳಕಂಡ ಷರತ್ತುಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

1. *ಈ ಆದೇಶವು ಕೇವಲ ಸಕ್ರಮಾತಿಗೊಂಡ ಅರೆಕಾಲಿಕ ಉಪನ್ಯಾಸಕರುಗಳಿಗೆ ಮಾತ್ರ ಅನ್ವಯಿಸತಕ್ಕದ್ದು;*
2. *ಎಂ.ಫಿಲ್. ಪದವಿಯ ನೈಜತೆಯ ಬಗ್ಗೆ ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ ಇವರು ಪರಿಶೀಲಿಸತಕ್ಕದ್ದು.*
3. *ಸರ್ಕಾರಿ ಮತ್ತು ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳ ಅರೆಕಾಲಿಕ ಉಪನ್ಯಾಸಕರಿಗೆ ಯುಜಿಸಿ ವೇತನ ವಿಸ್ತರಿಸುವ ಸಂಬಂಧ ಈ ಹಿಂದೆ ಹೊರಡಿಸಿಯವ ಆದೇಶಗಳಲ್ಲಿ ವಿಧಿಸಿಯವ ಉಳಿದ ಷರತ್ತುಗಳನ್ನು ಕಟ್ಟು-ನಿಟ್ಟಾಗಿ ಪಾಲಿಸತಕ್ಕದ್ದು.*

**ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 327 ವೆಚ್ಚ-8/2016, ದಿನಾಂಕ 04-08-2016ರ ಆದೇಶದ ಮೇರೆಗೆ ಹೊರಡಿಸಲಾಗಿದೆ.**

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಸ್.ವೀರಭದ್ರಪ್ಪ). 17/10
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು).

17/10

**ಕಾಲೇಜು ಶಿಕ್ಷಣ ಇಲಾಖೆ**

**ಸಂಖ್ಯೆ:**ಕಾಶಿಇ/321/ಅಯುಜಿಸಿವಿ/2015-16/ಸೇವಿ-1

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ.
ಬೆಂಗಳೂರು ದಿನಾಂಕ: 03.11.2016.

ಮೇಲ್ಕಂಡ ಸರ್ಕಾರದ ಆದೇಶವನ್ನು ಈ ಕೆಳಕಂಡವರಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ ರವಾನಿಸಲಾಗಿದೆ.

ಕಾಲೇಜು ಶಿಕ್ಷಣ ಮುಖ್ಯ ಆಡಳಿತಾಧಿಕಾರಿಗಳು

*ಇವರಿಗೆ,*

1. ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ-ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
2. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು-ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
3. ಜಂಟಿನಿರ್ದೇಶಕರು, ಪ್ರಾದೇಶಿಕ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು/ಮೈಸೂರು/ಶಿವಮೊಗ್ಗ/ಮಂಗಳೂರು/ಧಾರವಾಡ/ಕಲಬುರಗಿ -ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಬಹುಮಹಡಿಗಳ ಕಟ್ಟಡ ಬೆಂಗಳೂರು-ಮಾಹಿತಿಗಾಗಿ.
5. ಆಯುಕ್ತರು/ನಿರ್ದೇಶಕರು/ಹೆಚ್ಚುವರಿ ನಿರ್ದೇಶಕರು/ಜಂಟಿ ನಿರ್ದೇಶಕರುಗಳಿಗೆ/ಮುಖ್ಯ ಆಡಳಿತಾಧಿಕಾರಿಗಳ ಆಪ್ತ ಶಾಖೆಗೆ-ಮಾಹಿತಿಗಾಗಿ.
6. ಎಲ್ಲಾ ವಿಭಾಗದ ಮ್ಯಾನೇಜರ್/ಅಧೀಕ್ಷಕರುಗಳಿಗೆ-ಮಾಹಿತಿಗಾಗಿ.
7. ಕಛೇರಿ ಪ್ರತಿ.

movement order